'ಏನು ಹೇಳಿ..?'

'ನಿಮ್ಗೆ ಪ್ರಭಾಕರರಾಯರ ಮನೆ ಗೊತ್ತ..?'

'ಗೊತ್ತು..ಯಾಕೆ..?'

'ದಯವಿಟ್ಟು ಬರೋದಿಕ್ಕಾಗುತ್ತಾ..? ತುಂಬಾ ಅರ್ಜೆಂಟ್'

'ಅತ್ತೆ ಎಲ್ಲಿದ್ದಾರೆ..?' ಆದರ್ಶ ಪ್ರಶ್ನಿಸಿದ.

'ಅವ್ರು ಆಸ್ಪತ್ರೇಲಿದ್ದಾರೆ..ನಾನು ಮನೆಯಲ್ಲಿದ್ದೇನೆ..ಬೇಗ ಬನ್ನಿ..ಇಲ್ಲಿ ಬಂದ ಮೇಲೆ ವಿಷ್ಯ ತಿಳಿಸ್ತೇನೆ..' ಎಂದಳು. ಆದರ್ಶ ಸಂಪರ್ಕ ಕಡಿದ.

ಛೂ..ಎಂಥ ಪರಿಸ್ಥಿತಿ ಒದಗಿತು ತನಗೆ..ಆದರ್ಶ ತನ್ನ ಬಗ್ಗೆ ಅಪಾರ್ಥ ಮಾಡಿಕೊಳ್ಳದಿದ್ದರೆ ಸಾಕು..! ಆಂಟಿ, ಅಂಕಲ್ ಆಸ್ಪತ್ರೇಲಿರುವಾಗ, ತಾನು ಮನೆಯಲ್ಲಿ ಒಂಟಿಯಾಗಿದ್ದು ಅವನನ್ನು ಕರೆಯುತ್ತಿದ್ದೇನೆಂದರೆ ಅವನು ತನ್ನ ಬಗ್ಗೆ ಇಲ್ಲ ಸಲ್ಲದ್ದನ್ನೆಲ್ಲಾ ಯೋಚಿಸುತ್ತಾನೇನೋ ಎನಿಸಿ ಪೇಚಾಡಿಕೊಂಡಳು. ಅರ್ಧ ತಾಸು ಕಳೆಯುವುದರೊಳಗೆ ಅವಳ ಮೊಬೈಲಿಗೆ ಮತ್ತೆ ಕರೆ ಮಾಡಿದ.

'ನಾನು ಮನೆಯ ಹೊರಗಿದ್ದೇನೆ..ಇಲ್ಲಿ ಬಾಗಿಲಿಗೆ ಚಿಲಕ ಹಾಕಿದೆ..'

'ಅದನ್ನು ತೆರೆಯಿರಿ..ಅದನ್ನು ತೆರೆಯುವ ಸಲುವಾಗಿಯೇ ನಿಮ್ಮನ್ನು ಕರೆದದ್ದು..' ಎಂದಳು.

ಆದರ್ಶ ಚಿಲಕ ತೆರೆದು ಒಳಗೆ ಬಂದಿದ್ದ. ಒಳಗೆ ಬಂಧಿಯಾಗಿದ್ದ ಅಪೂರ್ವಳನ್ನು ಕಂಡು, 'ಯಾರು ನಿಮ್ಮನ್ನು ಒಳಗೆ ಕೂಡಿ ಹಾಕಿ ಹೋಗಿದ್ದು..?' ಹುಬ್ಬೇರಿಸಿ ಪ್ರಶ್ನಿಸಿದ.

ಅವನ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಹೋಗದೇ, 'ನಿಮ್ಗೆ ತುಂಬಾ ಥ್ಯಾಂಕ್ಸ್.. ನನಗಾಗಿ ಅಲ್ಲಿ ನಿಮ್ಮತ್ತೆ ಕಾಯ್ತಿರ್ತಾರೆ..ನಾನು ಕೂಡ್ಲೇ ಆಸ್ಪತ್ರೆಗೆ ಹೋಗ್ಬೇಕು..ನಿಮ್ಗೆ ಈ ಹೊತ್ತಿನಲ್ಲಿ ತೊಂದ್ರೆ ಕೊಟ್ಟೆ..ದಯವಿಟ್ಟು ಕ್ಷಮಿಸಿ..' ಎಂದವಳೇ ಅವನೆಡೆಗೆ ನೋಡದೇ ತನ್ನ ಕೈ ಚೀಲ ಹಿಡಿದು ಲಗುಬಗನೇ ಹೊರ ನಡೆಯುವ ಆತುರ ತೋರಿಸಿದಳು.

'ಅಪೂರ್ವ..ಒಂದ್ನಿಮಿಷ..ಇಲ್ಲಿ ನನ್ನ ಕಡೆ ನೋಡಿ..' ಆದರ್ಶ ಗಂಭೀರವಾಗಿ ನುಡಿದಾಗ ಅಪೂರ್ವ ಕತ್ತು ಹೊರಳಿಸಿ ಅವನೆಡೆಗೆ ದಿಟ್ಟಿಸಿದಳು. ಅವಳ ತುಟಿಯೊಡೆದು ಒಸರುತ್ತಿದ್ದ ರಕ್ತ ಹೆಪ್ಪುಗಟ್ಟಿತ್ತು. ಕೆನ್ನೆಗಳ ಮೇಲೆ ನಿಚ್ಚಳವಾಗಿ ಗೋಚರಿಸುತ್ತಿದ್ದ ಬೆರಳಚ್ಚು ಅವನ ಕಣ್ಣಿಗೆ ಬೀಳದೇ ಹೋಗಲಿಲ್ಲ.

'ಯಾರು ನಿಮ್ಮ ಮೇಲೆ ಕೈ ಮಾಡಿದ್ದು..? ಈ ರಕ್ತ ಹೇಗೆ ಬಂತು..? ನಿಮ್ಗೆ ಇಲ್ಲಿ ಕೂಡಿ ಹಾಕಿ ಹೋಗಿದ್ದು ಯಾರು..?'

'ಅದೆಲ್ಲಾ ಉತ್ತರಿಸುವ ವೇಳೆ ಅಲ್ಲ ಇದು..ನೀವು ಹೊರಗಡೆ ಬಂದ್ರೆ, ನಾನು ಮನೆಗೆ ಬೀಗ ಹಾಕಿ ಆಸ್ಪತ್ರೆಗೆ ಹೋಗ್ತೀನಿ..' ಅವನ ನೋಟದ ತೀಕ್ಷ್ಣತೆ ಎದುರಿಸಲಾರದೇ ಬೆನ್ನು ಮಾಡಿ ಮುಂಬಾಗಿಲು ದಾಟಿ ಹೊರಗೆ ಅವನಿಗಾಗಿ ಕಾಯುತ್ತ ನಿಂತಾಗ, ಆದರ್ಶ ಕಾಲೆಳೆದುಕೊಂಡು ಹೊರ ಬಂದವನು, 'ಅಪೂರ್ವ..ನಿಮಗೇನೂ ಆಗಿಲ್ಲ ತಾನೇ..? ಐ..ಮೀನ್..!' ಎಂದು ಮಾತು ನಿಲ್ಲಿಸಿ ಅವಳೆಡೆಗೆ ಅರ್ಥಗರ್ಭಿತವಾಗಿ ನೋಡಿದ. ಅವನ ಮನದಲ್ಲಿದ್ದ ಅನುಮಾನ ಅವಳಿಗೆ ಅರ್ಥವಾಯಿತು. 'ಇಲ್ಲಾ ಡಾಕ್ಟರ್..ನಿಮ್ಮ ಕಳಕಳಿಗೆ ಥ್ಯಾಂಕ್ಸ್..ಆ ರೀತಿ ಏನೂ ಇಲ್ಲ..ನೀವು ಚಿಂತಿಸಬೇಡಿ..ನಿಮ್ಗೆ ತೊಂದ್ರೆ ಕೊಟ್ಟದ್ದಕ್ಕೆ ಮತ್ತೊಮ್ಮೆ ಸಾರಿ..' ಎಂದಳು. ಮನೆಗೆ ಬೀಗ ಜಡಿದು ಹೊರಟವಳನ್ನು ಮತ್ತೆ ಆದರ್ಶ ತಡೆದ, 'ನೀವು ..ಈಗ ಆಸ್ಪತ್ರೆಗೆ ಹೊರಟ್ರಾ..?'

**ಅತಿಥಿ**

ಕೈಚಾಚಿ ಕರೆಯೋಕೆ
ಮರಗಳು
ಇಲ್ಲದಿರುವುದರಿಂದ
ಬಾರದೆ ಹೋಯಿತು
ಮಳೆಯೆಂಬ ಅತಿಥಿ!

★ ವಿ. ಪುಗಳೇಂದಿ



ವಿಜಯ

'ಹೌದು..!' ಎಂದಳು.

'ನಡೀರಿ..ನನ್ನ ಕಾರಿನಲ್ಲಿ ಡ್ರಾಪ್ ಮಾಡ್ತೀನಿ..ನೀವು ಈ ಪರಿಸ್ಥಿತಿಯಲ್ಲಿ ಹೋದ್ರೆ.. ಜನ ಅಪಾರ್ಥ ಮಾಡ್ಕೋತಾರೆ..' ಅಪೂರ್ವಳಿಗೆ ಮನಸ್ಸಿಲ್ಲದೇ ಹೋದರೂ, ಆ ಸ್ಥಿತಿಯಲ್ಲಿ ತಾನು ಬೇಗ ಆಸ್ಪತ್ರೆ ಸೇರಿದರೆ ಸಾಕೆನ್ನುವಂತಾಗಿತ್ತು. ಇಬ್ಬರೂ ಅಂಗಳ ದಾಟಿ ಕಾರು ಹತ್ತಿದರು.

ದಾರಿಯಲ್ಲಿ ತಡೆಯಲಾರದೇ ಆದರ್ಶ ಮತ್ತೆ ಕೆದಕಿದ,'ಅಪೂರ್ವ..ನಾನು ಹೀಗೆ ಕೇಳ್ತಿದ್ದೇನೆ ಅಂತ ತಪ್ಪು ತಿಳಿಯಬೇಡಿ.. ನೋಡಿ..ಅದು ನನ್ನ ಮಾವ ಮತ್ತು ಅತ್ತೆಯ ಮನೆ..ಮನೆಯೊಳಗೆ ಹೀಗೆ ನುಗ್ಗಿ ನಿಮ್ಮ ಮೇಲೆ ಕೈ ಮಾಡಿ, ನಿಮ್ಮನ್ನು ಹೀಗೆ ಕೂಡಿ ಹಾಕಿದವರು ಯಾರು ಅಂತ ನನಗೆ ತಿಳಿಯಲೇಬೇಕು.. ನಾಳೆ..ಇದಕ್ಕೂ ಮೀರಿದ ಅನಾಹುತವಾದರೆ ಯಾರು ಜವಾಬ್ದಾರಿ..?'

'ನೀವು ತಿಳಿದುಕೊಂಡಂತೆ ಏನೂ ಇಲ್ಲಾ ಡಾಕ್ಟರ್..!' ಅಪೂರ್ವ ಮಾತು ತೇಲಿಸುವ ಪ್ರಯತ್ನ ಮಾಡಿದಾಗ ಆದರ್ಶನ ತಾಳ್ಮೆ ಸಡಿಲಿಸಿತು. 'ಅಪೂರ್ವ.. ನಿನ್ನ ಆಂಟಿ ಅಂಕಲ್‌ನ ಸಂಬಂಧಿಕನಾಗಿ ಅದನ್ನು ತಿಳಿಯುವ ಅಧಿಕಾರ ನನಗಿದೆ.. ದಯವಿಟ್ಟು ವಿಷಯ ಮುಚ್ಚಿಟ್ಟು ಗೊಂದಲಗಳನ್ನು ಸೃಷ್ಟಿಸಬೇಡಿ.' ಅವನ ಕಂಗಳಲ್ಲಿ ತೀಕ್ಷ್ಣತೆಯಿದ್ದರೆ ಮಾತಿನಲ್ಲಿ ಹರಿತವಿತ್ತು.

'ನಾನು ಅಪ್ಪ ಅಮ್ಮನ ಹತ್ತಿರ ಮಾತನಾಡುವಾಗ, ಅವ್ರು ನಿಮ್ಮ ಬಗ್ಗೆ ಹೇಳಿದರು.. ನೀವೆಷ್ಟಾದರೂ ಹೊರಗಿನವರು..ಮಾವ ಅತ್ತೆ ಇಲ್ಲದ ಮೇಲೆ, ಮನೆಯೊಳಗೆ ಸೇರಿಕೊಂಡು ಏನು ಮಸಲತ್ತು ನಡೆಸ್ತಾ ಇದ್ರಿ..? ಏನು ನಿಮ್ಮ ಕಳ್ಳ ವ್ಯವಹಾರ..? ಯಾರು ನಿಮ್ಮನ್ನು ಕೂಡಿ ಹಾಕಿದ್ದು..?' ಆದರ್ಶನ ಆಪಾದನೆಗೆ ಅಪೂರ್ವ ಭೂಮಿಗಿಳಿದು ಹೋದಳು. ಅವನ ಕಲ್ಪನೆಯನ್ನು, ಅವನು ಹೊರೆಸಿದ ಆರೋಪವನ್ನು ಜೀರ್ಣಿಸಿಕೊಳ್ಳಲು ಅಪೂರ್ವಳಿಗೆ ನಿಮಿಷಗಳೇ ಹಿಡಿದವು. ಸೂರ್ಯ ಹೊಡೆದ ಏಟಿಗಿಂತಲೂ, ಆದರ್ಶನ ಮಾತುಗಳು ಅಪೂರ್ವಳ ಮಾನಸ್ಸನ್ನು ತೀವ್ರವಾಗಿ ಘಾಸಿಗೊಳಿಸಿತ್ತು. ಮನಸ್ಸಿನ ವೇದನೆ ಅಪ್ರಯತ್ನವಾಗಿ ಕಂಬನಿಯ ರೂಪ ತಳೆದಿತ್ತು.

'ಒಬ್ಬ ಅಸಹಾಯಕ ಹುಡುಗಿ, ಯಾರದ್ದೋ ಆಸರೆಯಲ್ಲಿ ಇದ್ದಾಳೆ ಅಂದ್ರೆ.. ಸಮಾಜದ ದೃಷ್ಟಿಯಲ್ಲಿ ಎಷ್ಟೊಂದು ಅಗ್ಗವಾಗಿ ಬಿಡ್ತಾಳೆ..? ಒಬ್ಬ ಬಂದು ಕೈ ಮಾಡಿ ಹೋಗ್ತಾನೆ.. ಮತ್ತೊಬ್ಬ ಕಳ್ಳತನ ಆರೋಪ ಹೊರಿಸ್ತಾನೆ..ಬಹಳ ಚೆನ್ನಾಗಿದೆ.. ನಾನು ಕಳ್ಳತನ ಮಾಡ್ತಿದ್ರೆ..ನೀವು ಆ ಮನೆಯ ಸಂಬಂಧಿಕರೆಂದು ತಿಳಿದೂ ಸಹ ನಿಮ್ಮನ್ನು ಕರೆದು ನನ್ಗೆ ಸಹಾಯ ಮಾಡಿ ಅಂತ ಕರೀತಿರಲಿಲ್ಲಾ.. ಅಲ್ವಾ..? ನೀವು ಇಂಥ ಆರೋಪ ಹೊರೆಸಿದ್ದೀರಿ. ನಿಮಗೆ ನಾನು ಸಮರ್ಥನೆ ಕೊಡಲೇಬೇಕಾಗಿದೆ ಎನ್ನುವ ಕಾರಣಕ್ಕೆ ಈಗ ಹೇಳಲೇಬೇಕಾಗಿದೆ..ನನ್ನನ್ನು ಮನೆಯೊಳಗೆ ಕೂಡಿ ಹಾಕಿದ್ದು ಬೇರೆ ಯಾರೋ ಅಲ್ಲ..ವಿಜಯಮ್ಮ ಮತ್ತು ಪ್ರಭಾಕರರಾಯರ ಮಗ ಸೂರ್ಯ..!' ಎಂದು ಅವನನ್ನು ಮೊದಲ ಬಾರಿಗೆ ಕಂಡದ್ದರಿಂದ ಹಿಡಿದು ಅವನು ಮನೆಯೊಳಗೆ ಕೂಡಿ ಹಾಕಿ ಹೋದ ಸಂಗತಿಯ ತನಕ ನಡೆದುದ್ದೆಲ್ಲವನ್ನೂ ತಿಳಿಸಿದಳು.

'ಐ..ಆಂ ಸಾರಿ ಅಪೂರ್ವ..ಒಂದ್ಸಲಕ್ಕೆ ನಾನು ಅತಿರೇಕವಾಗಿ ಕಲ್ಪಿಸಿಕೊಂಡು ಏನೇನೋ ಹೇಳಿದೆ..ದಯವಿಟ್ಟು ನನ್ನ ಮಾತುಗಳನ್ನು ಮನಸ್ಸಿಗೆ ಹಚ್ಕೋಬೇಡಿ.. ನನ್ನನ್ನು ಕ್ಷಮಿಸಿ..' ಆದರ್ಶ ಪಶ್ಚಾತ್ತಾಪ ತುಂಬಿದ ದನಿಯಲ್ಲಿ ನುಡಿದ.

'ಪರ್ವಾಗಿಲ್ಲ..ನಾನು ಗತಿಯಿಲ್ಲದೇ ಇನ್ನೊಬ್ಬರ ಮನೆಯ ಆಸರೆ ಪಡೆದಿರಬಹುದು..ಆದರೆ ಉಂಡ ಮನೆಗೆ ಕನ್ನ ಹಾಕುವ ನೀಚತನ ಖಂಡಿತವಾಗಿ ನನ್ನಲ್ಲಿಲ್ಲ..ರಾಯರು ನನಗೆ ಸ್ವಾವಲಂಬಿಯಾಗಿ ಬದುಕುವ ಮಾರ್ಗ ಮಾಡಿಕೊಟ್ಟಿದ್ದಾರೆ..ನನಗೆ ಹೊಸ ವ್ಯಕ್ತಿತ್ವ ದೊರಕಿಸಿ ಕೊಟ್ಟಿದ್ದಾರೆ..ಆ ಮನೆಗೆ ನಾನು ಕೇಡು ಬಯಸ್ತೀನಾ..? ನಿಮ್ಗೆ ಸೂರ್ಯನ ಬಗ್ಗೆ ತಿಳಿದಿದೆಯೋ ಇಲ್ಲವೋ ಎಂಬ ಕಾರಣಕ್ಕೆ ನಾನು ಈ ವಿಷ್ಯ ಹೇಳಲು ಅನುಮಾನಿಸಿದೆ ..ಅಷ್ಟೇ..! ನೀವು ವೈದ್ಯರು..ಎಷ್ಟೊಂದು ತಿಳುವಳಿಕೆ ಉಳ್ಳವರು..ಇನ್ನೊಬ್ಬರಿಗೆ ಏನಾದರೂ ಹೇಳುವ ಮುನ್ನ..ಆ ಮಾತುಗಳಿಂದ ಆ ವ್ಯಕ್ತಿಯ ಮನಸ್ಸಿಗೆ ಆಗುವ ಪರಿಣಾಮದ ಬಗ್ಗೆ ಯೋಚಿಸಿ ಮಾತನಾಡುವುದು ಒಳಿತು..ನಾನು ನಿರ್ಗತಿಕಳಾಗಿರಬಹುದು..ಆದ್ರೆ ಸ್ವಾಭಿಮಾನ ಎನ್ನುವುದು ನನ್ನಲ್ಲೂ ಇದೆ..'ಅಷ್ಟರಲ್ಲಿ ಆದರ್ಶನ ಕಾರು ಆಸ್ಪತ್ರೆಯ ಆವರಣ ತಲುಪಿತ್ತು. ಕಾರು ನಿಲ್ಲುತ್ತಲೇ, ಅವನತ್ತ ತಿರುಗಿಯೂ ನೋಡದೇ ಕೆಳಗಿಳಿದು ನಡೆದು ಹೋದ ಅಪೂರ್ವಳಿಗೆ ತನ್ನ ಮಾತುಗಳಿಂದ ತೀವ್ರವಾಗಿ ನೋವಾಗಿದೆ ಎಂದು ಅರಿವಾಗುತ್ತಲೇ, ಆದರ್ಶ ತಡೆಯಲಾರದೇ ಕೆಳಗಿಳಿದು ಅವಳನ್ನು